JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕನ್ನಡ ಪರಿಸರದ ಜನಪದರ ನಂಬಿಕೆಗಳು : ವಿಶ್ಲೇಷಣಾತ್ಮಕ ಅವಲೋಕನ

**ಡಾ. ಆರ್. ವಿ. ಪಾಟೀಲ**
*ಸಹ ಪ್ರಾಧ್ಯಾಪಕ.*
*ಮುಖ್ಯಸ್ಥರು, ಕನ್ನಡ ವಿಭಾಗ,*
*ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಎಸ್.ಕೆ.ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ–04*

ರಹಸ್ಯಮಯವಾದ ಸೃಷ್ಟಿಯು ದೈವಲೀಲೆಯಿಂದ ಹುಟ್ಟಿಕೊಂಡಿದೆ ಎಂದು ಜನಸಾಮಾನ್ಯರು ನಂಬಿಕೊಂಡು ಬಂದಿದ್ದಾರೆ. ಇಂಥ ವಿಸ್ಮಯಕಾರಿಯಾದ ಜಗತ್ತಿನಲ್ಲಿ ಮನುಷ್ಯನು ಅತಿಮಾನುಷ ಶಕ್ತಿಗಳನ್ನು 'ದೇವರೆಂದು', ಮಾರಕವಾದ ಶಕ್ತಿಗಳನ್ನು 'ಸೈತಾನ–ದೆವ್ವ' ಎಂದು ನಂಬಿ ಅವುಗಳಿಗೆ ಸಾಂಕೇತಿಕ ಹೆಸರುಗಳಿಂದ ಆರಾಧಿಸುವ ಪರಂಪರೆಯನ್ನು ರೂಪಿಸಿಕೊಂಡು ಬಂದನು. ಹೀಗೆ ರೂಢಿಸಿಕೊಂಡು ಬಂದ ಆಚಾರಗಳೆ, ಜನಪದರಲ್ಲಿ ನಂಬಿಕೆಗಳಾಗಿ ಬಲಗೊಂಡವು. ದೇಶ, ಪ್ರದೇಶವಾರು ಭಿನ್ನ–ಭಿನ್ನ, ಆಚಾರ–ವಿಚಾರಗಳು ಹುಟ್ಟಿಕೊಂಡವು. ನಂಬಿಕೆಗಳು ಹೇಗೆ ಹುಟ್ಟಿದವು, ಯಾಕೆ ಹುಟ್ಟಿದವು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಏಕೆಂದರೆ ನಂಬಿಕೆಗೂ ಮಾನವನಿಗೂ ಅವಿನಾಭಾವ ಸಂಬಂಧವಿದೆ. ನಂಬಿಕೆ ಇಲ್ಲದವನು ಬದುಕಲು ಸಾಧ್ಯವಿಲ್ಲ.

**ಪೂರ್ವ ಅಧ್ಯಯನಗಳ ಅವಲೋಕನ :** ಕರ್ನಾಟಕ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಪೀಠದ 23ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಕೆ.ಆರ್.ಬೆಲ್ಲದ ಕಾಲೇಜು ಮುಂಡರಗಿಯಲ್ಲಿ ಫೆಬ್ರವರಿ 18–19–1996ರಂದು ಡಾ.ಎಂ.ಜಿ.ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಡಾ.ಎಂ.ಬಿ.ನೇಗಿನಾಳ, ಡಾ.ಮ.ಗು.ಬಿರಾದಾರ, ಎ.ಛಿ.ನಾವೆಡ, ಡಾ.ವಿಲ್ಯಂ ಮಾಡ್ತಾ, ಪುರುಷೋತ್ತಮ ಬಿಳಿಮಲೆ, ಡಾ.ಹರಿಲಾಲ ಪವಾರ, ಶ್ರೀ.ನಾರಾಯಣಸ್ವಾಮಿ, ಡಾ.ಮಧು ವೆಂಕಾರೆಡ್ಡಿ, ಡಾ.ವೀರಣ್ಣ ದಂಡೆ, ಶ್ರೀ.ಎಸ್.ಬಿ.ಭರಮಗೌಡರ, ಡಾ.ಶ್ರೀಕಂಠ ಕೂಡಗೆ, ಡಾ.ಬಿ.ಬಿ.ಬಿರಾದಾರ ಹೀಗೆ ಹಲವಾರು ವಿದ್ವಾಂಸರ ಮೂಲಕ ನಂಬಿಕೆಗಳ ವಿವಿಧ ಆಯಾಮಗಳ ಪ್ರಬಂಧ ಮಂಡನೆಯೊಂದಿಗೆ ಸಮ್ಮೇಳನ ನಡೆಸಿ ಜಾನಪದ ಸಾಹಿತ್ಯ ದರ್ಶನ ಭಾಗ–23 ಜನಪದ ನಂಬಿಕೆಗಳ ಕೃತಿಯನ್ನು ಪ್ರಸಾರಂಗ ಪ್ರಕಟಿಸಿತು. ಹೀಗೆ ನಂಬಿಕೆ ಕುರಿತ ಅಧ್ಯಯನಗಳು ಅಲ್ಲಲ್ಲಿ ನಡೆದಿವೆ.

**ನಂಬಿಕೆಯ ವಿಧಗಳು :** ನಂಬಿಕೆಗಳ ಸ್ವರೂಪ ಹಾಗೂ ಕಾರ್ಯವನ್ನು ಅನುಸರಿಸಿ ಈ ರೀತಿ **ಆರ್.ಎಸ್.ಬಾಗ್ಸ್** ಅವರು ವಿಭಾಗಿಸಿರುವರು. **ಪುರಾಣ, ಐತಿಹ್ಯ, ಪದ್ಧತಿ, ಮಾಂತ್ರಿಕತೆ, ವೈದ್ಯ, ಕಾಲಜ್ಞಾನ** ಎಂದು ವಿಭಾಗಿಸಿದ್ದಾರೆ. **ವೇಲ್ಯಾಂಡ್** ಅವರು; ಮನುಷ್ಯ ಶರೀರ ಹಾಗೂ ವೈದ್ಯಕ್ಕೆ ಸಂಬಂಧಿಸಿದವು, ಜೀವನ ಚಕ್ರಕ್ಕೆ ಸಂಬಂಧಿಸಿದವು, ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು, ಮಾಟ ಮತ್ತು ಮಂತ್ರವಿದ್ಯೆ, ಭೂತಪ್ರೇತ, ಸಾವು ಮುಂತಾದವುಗಳಿಗೆ ಸಂಬಂಧಿಸಿದವು, ಸಂಖ್ಯೆಗಳು ಮತ್ತು ಖಗೋಳ ಸಂಗತಿಗಳು, ಬೇಸಾಯಕ್ಕೆ ಸಂಬಂಧಿಸಿದವು. ಹವಾಮಾನ, ಕೃಷಿ, ಬೇಟೆ, ಮೀನುಗಾರಿಕೆ ಕೆಲಸ ಕಾರ್ಯವನ್ನು ನಂಬಿಕೆಗಳು ಅವಲಂಬಿಸಿವೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ವಿಭಜನ ಮಾದರಿ ಸ್ಥೂಲ ವಿಭಾಗ ಕ್ರಮವನ್ನು ಹೀಗೆ ಮಾಡಿರುವರು. **1)ಅತಿಮಾನುಷ 2)ಮಾನುಷ 3)ಪ್ರಾಣಿ 4)ಪ್ರಕೃತಿ 5)ಕೌಟುಂಬಿಕ 6) ಸಂಕೀರ್ಣ.** ದೇ.ಜವರೇಗೌಡ ಅವರು ನಂಬಿಕೆಗಳನ್ನು ಹತ್ತು ಗುಂಪಾಗಿ ವಿಂಗಡಿಸಿದ್ದಾರೆ.(1986 :107)**1)ಧಾರ್ಮಿಕ ನಂಬಿಕೆಗಳು 2)ಐತಿಹ್ಯಾತ್ಮಕ ನಂಬಿಕೆಗಳು 3)ಗೃಹ ನಂಬಿಕೆಗಳು 4)ವೈದ್ಯಕೀಯ ನಂಬಿಕೆಗಳು 5)ಔದ್ಯೋಗಿಕ ನಂಬಿಕೆಗಳು 6)ನೈಸರ್ಗಿಕ ನಂಬಿಕೆಗಳು 7)ಪ್ರಾಣಿ ನಂಬಿಕೆಗಳು 8)ಮಂತ್ರ ಸಂಬಂಧಿ ನಂಬಿಕೆಗಳು 9)ಜ್ಯೋತಿಷ್ಯಾತ್ಮಕ ನಂಬಿಕೆಗಳು 10)ಸಂಕೀರ್ಣ ನಂಬಿಕೆಗಳು. ಬೌದ್ಧಿಕ ನಂಬಿಕೆಗಳು:** ಬೌದ್ಧಿಕ ನಂಬಿಕೆಗಳನ್ನು ಎರಡು ವಿಧದಲ್ಲಿ ವಿಂಗಡಿಸಬಹುದು. 1)ಧಾರ್ಮಿಕ ನಂಬಿಕೆಗಳು 2) ಸಾಂಸ್ಕೃತಿಕ ನಂಬಿಕೆಗಳು.

**ಧಾರ್ಮಿಕ ನಂಬಿಕೆಗಳು:** ಮಾನವ ಮನಸ್ಸಿನ ಭಯ ಮತ್ತು ಆತಂಕಗಳು, ಈ ಬಗೆಯ ಧಾರ್ಮಿಕ ನಂಬಿಕೆಗಳಿಗೆ ಮೂಲ. ಇಂತಹ ಸಂದರ್ಭಗಳಲ್ಲಿ ಅವನಿಗೆ ಸಂಬಂಧಿಸಿ ಹುಟ್ಟಿಕೊಂಡವುಗಳು. ದೇವರು, ದೆವ್ವಗಳು. ಆಗ ದೇವರ ಸ್ವರೂಪ, ಕಾರ್ಯಗಳಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆಗಳನ್ನು ಹುಟ್ಟುಹಾಕಿದ. ಅಮೂರ್ತ ದೇವರನ್ನು ವಾಸ್ತವ ಜಗತ್ತಿನ ವಸ್ತು ವಿಷಯಗಳೊಂದಿಗೆ ಸಮೀಕರಿಸಿ ಪೂಜಿಸತೊಡಗಿದ. ಉದಾಹರಣೆ ತೆಂಗಿನಕಾಯಿಯನ್ನು ಕಾಲಿನಿಂದ ತುಳಿಯಬಾರದು. ಅದು ಮುಕ್ಕಣ್ಣ. ಬೀಸುವ ಕಲ್ಲನ್ನು ತುಳಿಯಬಾರದು ಅದು ಲಕ್ಷ್ಮಿ. ಲೌಕಿಕ ಕ್ರಿಯೆಯೊಂದನ್ನು ಸಮರ್ಪಕವಾಗಿ ಮಾಡಲು ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು. ಉದಾಹರಣೆಗೆ ಕಾಲನ್ನು ತೊಳೆಯುವಾಗ ಹಿಮ್ಮಡ ಪೂರ್ತಿ ನೆನೆಯಬೇಕು. ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ. ಕಸಗುಡಿಸಿ ಹೊರ ಹಾಕಬಾರದು, ಲಕ್ಷ್ಮೀ ಹೊರಟು ಹೋಗುತ್ತಾಳೆ. ಕಾಮಣ್ಣನ ಬೆಂಕಿಯಲ್ಲಿ ಕಡ್ಲಿ ಸುಟ್ಟು ತಿಂದರೆ ಹಲ್ಲು ಗಟ್ಟಿಯಾಗುವವು,

**ಸಾಂಸ್ಕೃತಿಕ ನಂಬಿಕೆಗಳು :** ಚಿಕ್ಕ ವಯಸ್ಸಿನಲ್ಲಿ ಮದುವೆಯಾದ ಹೆಣ್ಣು ಗಂಡಿನ ಮನೆಯಲ್ಲಿ ಋತುಮತಿಯಾದರೆ ಅಂದಿನಿಂದ ಪ್ರಸ್ತದವರೆಗೂ ಗಂಡ ಹೆಂಡತಿಯ ಮುಖ ನೋಡಬಾರದು. ಮದುವೆಯಾದ ಒಂದು ವರ್ಷದ ಒಳಗಾಗಿ ಅತ್ತೆ ಅಳಿಯನಿಗೆ ಊಟಕ್ಕೆ ನೀಡಬಾರದು. ಪ್ರಸ್ತದ ದಿನ ರಾತ್ರಿ ದೀಪ ನಂದದಂತೆ ನೋಡಿಕೊಳ್ಳಬೇಕು. ಗಂಡು ಹೆಣ್ಣು ನಾಚದೆ, ಪರಸ್ಪರರ ಮುಖದ ಮೇಲಿನ ಪ್ರತಿಕ್ರಿಯೆಯನ್ನು ತಿಳಿಯಲು, ಮುಖದ ಸೌಂದರ್ಯವನ್ನು ನೋಡಿ ಆನಂದಿಸಲು, ಲಜ್ಜಾಭಾವ ತೊರೆದು ಮಾನಸಿಕವಾಗಿ ಹತ್ತಿರವಾಗಲು ಇಂಥ ನಂಬಿಕೆಗಳು ಹುಟ್ಟಿರಬೇಕು.

**ವೈಯಕ್ತಿಕ ನಂಬಿಕೆಗಳು:** ವೈಯಕ್ತಿಕ ನಂಬಿಕೆಗಳು ಮೊದಲಿಗೆ ವ್ಯಕ್ತಿಯೊಬ್ಬನ ಸ್ವತ್ತಾಗಿದ್ದು, ಮುಂದೆ ಸಾಮಾಜೀಕರಣದ ಫಲವಾಗಿ ಅದು ಸಾಂಸ್ಕೃತಿಕ ರೂಪವನ್ನು ತಾಳುತ್ತವೆ. ಶನಿವಾರ ಹೊಸ ಬಟ್ಟೆ ಉಡಬಾರದು. 108, 1008, 786, 7, 3, 5, 9ರ ಸಂಖ್ಯೆ ಶುಭ, ಮಂಗಳವಾರ ಮದುಮಗಳು/ಮನೆಮಗಳು ತವರು ಮನೆಯಿಂದ ಹೋಗಬಾರದು. ಶುಕ್ರವಾರ ಸೊಸೆ ಹೋಗಬಾರದು ಮುಂತಾದವು.

**ದೈವತ್ವಕ್ಕೆ ಸಂಬಂಧಿಸಿದ ನಂಬಿಕೆಗಳು :** ಭೂಮಿಯನ್ನು ದೇವರೆಂದು ಪೂಜಿಸಿದರೂ, ಅವಳನ್ನು ಸಂಪೂರ್ಣ ರೂಪದಿಂದ ಪೂಜಿಸಬೇಕೆ ಹೊರತು ಸಂಕೀರ್ಣ ರೂಪದಿಂದಲ್ಲ ಎಂಬುದು ನಂಬಿಕೆ. ಆದ್ದರಿಂದಲೇ ಅವಳಿಗೆ ಗುಡಿಗೋಪುರಗಳು ನಿಷಿದ್ಧ, ಹಳ್ಳಿಗಳಲ್ಲಿ ಒಂದು ಪವಿತ್ರ ವೃಕ್ಷದ ಕೆಳಗಡೆ ಕಲ್ಲು, ಮಣ್ಣು, ಮಡಿಕೆ, ಗಾಜಿನ ಚೂರುಗಳಲ್ಲಿ ಒಂದು ಗುಡ್ಡವನ್ನು ಮಾಡಿ, ಅಲ್ಲಿಗೆ ಜನರು ಸಾಮೂಹಿಕವಾಗಿ ಒಂದು ಹರಕೆ ಕಾಣಿಕೆಗಳ ಸಮೇತ ಪೂಜೆ ಮಾಡುತ್ತಾರೆ. ಗಂಗೆಯ ನೀರಲ್ಲಿ ಬಿದ್ದವನನ್ನು ನೂರುಬಾರಿ ತೇಲಿಸುವಳೆಂದೂ, ಭೂಮಿಯು ಸಹನೆಯ ಮೂರ್ತಿ ಎಂದೂ ತಿಳಿದಿದ್ದೇವೆ. ಸ್ತ್ರೀಯರಿಗೆ ಅತ್ಯಂತ ಕಷ್ಟಕರವಾದ ಪ್ರಸಂಗಗಳು ಬಂದಾಗ, ಕೆಲವು ಮಂತ್ರಗಳನ್ನುಚ್ಚರಿಸುತ್ತಾ ಭೂಮಿಗೆ ನಮಸ್ಕರಿಸಿದರೆ, ಪರಿಹಾರವಾಗುವುದೆಂಬ ಭಾವನೆ ಇತ್ತು. ಸ್ತ್ರೀ ಅವಮಾನವಾಗುವ ಸಂದರ್ಭದಲ್ಲಿ ಭೂಮಿಯು ಬಾಯಿಬಿಟ್ಟು ಅವಳನ್ನು ಸೇರಿಸಿಕೊಳ್ಳುವುದೆಂಬ ನಂಬಿಕೆ.

**ನಿಸರ್ಗಕ್ಕೆ ಸಂಬಂಧಿಸಿದ ನಂಬಿಕೆಗಳು:** ಸಕಲ ಪ್ರಾಣಿಗಳ, ಗಿಡ–ಮರಗಳ, ಜಲನಿಧಿಗಳ ತಾಣ ಈ ಭೂಮಿ. ಇದು ವಿಶಾಲವಾಗಿ, ಚಪ್ಪಟೆಯಾಗಿದೆ ಎಂಬುದು ನಂಬುಗೆ. ಸೂರ್ಯ–ಚಂದ್ರರು ದೇವರ ಮಕ್ಕಳು, ಇವರ ತಾಯಿ ಭೂದೇವಿ. ಭೂದೇವಿ, ಗಂಗಾಮಾತೆಯರು ಈ ಪ್ರಪಂಚದ ಸ್ಥಿತಿ–ಲಯಗಳೆರಡಕ್ಕೂ ಕಾರಣಕರ್ತರಾಗಿದ್ದಾರೆ. ಅತ್ಯಂತ ಕ್ಷಮಾಶೀಲರೂ, ಸಹಾನುಭೂತಿಯುಳ್ಳವರೂ ಅಗಿದ್ದು ನಮ್ಮ ಅನೇಕ ತಪ್ಪುಗಳನ್ನು ಮನ್ನಿಸಿ ನಮ್ಮನ್ನು ಕಾಪಾಡುವರೆಂದು ಅವರನ್ನು ಆರಾಧಿಸುತ್ತ ಬಂದಿದ್ದೇವೆ.

**ವ್ಯವಸಾಯಕ್ಕೆ ಸಂಬಂಧಿಸಿದ ನಂಬಿಕೆಗಳು:** ರಾಶಿ ತೂರುವಾಗ ತಲೆಗೆ ವಸ್ತ್ರಾ ಕಟಗೋ ಬೇಕು, ಭೂಮಿಯನ್ನು ನೋಯಿಸಬಾರದೆಂದು ಉಳುವಾಗ ರೈತರು ದೊಡ್ಡ ನೇಗಿಲನ್ನು ಉಪಯೋಗಿಸುವುದಿಲ್ಲ, ಚಪ್ಪಲ್ಲಿ ಧರಿಸಿ ಹೊಲದಲ್ಲಿ ನಡೆದಾಡುವುದಿಲ್ಲ. ಅಲ್ಲದೆ ರಸಗೊಬ್ಬರ ಹಾಕಿದರೆ ಭೂಮಿ ಮೈಲಗಿ ಆಗುತ್ತದೆ, ಕೋಪಗೊಂಡು ಬೆಳೆ ನೀಡುವುದಿಲ್ಲವೆಂದು ಈ ಹಿಂದೆ ನಂಬಿದ್ದರು. ಸುಗ್ಗಿಯ ದೇವತೆಯಾಗಿ ಗೌರಿಯನ್ನು ಪೂಜಿಸುವರು. ಸ್ತ್ರೀಯ ತಲೆಯ ಮೇಲೆ ಹೂವಿನ ಗೊಂಚಲನ್ನು ಸ್ತ್ರೀ ರೂಪದಲ್ಲಿ ಮಾಡಿ, ವಸ್ತ್ರ ಒಡವೆಗಳಿಂದ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಈ ರೀತಿಯ ಆರಾಧನೆಗಳಿಂದ ಹರ್ಷಿಸುವ ಭೂದೇವಿ ಸಂತೃಪ್ತಳಾಗಿ ಮತ್ತಷ್ಟು ವರ್ಧಿಸುತ್ತಾಳೆ ಎಂದೇ ನಂಬಿಕೆ.

**ಬಲಿಗೆ ಸಂಬಂಧಿಸಿದ ನಂಬಿಕೆಗಳು:** ನರಬಲಿ, ಹರೆ ಕಾಣಿಕೆಗಳನ್ನು ನದಿಗೆ, ಭೂಮಿಗೆ ಅರ್ಪಿಸುವುದು ಎಲ್ಲಾ ದೇಶದಲ್ಲೂ ಎಲ್ಲಾ ಕಾಲದಲ್ಲೂ ನಡೆದು ಬಂದಿದೆ. ಕುರಿ, ಕೋಳಿಯನ್ನು ಕರೆಮ್ಮ, ಮರೆಮ್ಮ, ಮಾರೆಮ್ಮ, ದುರ್ಗಮ್ಮ ಮುಂತಾದ ದೇವರುಗಳಿಗೆ ಹರಕೆ ರೂಪದಲ್ಲಿ ಬಲಿಕೊಟ್ಟರೆ ಒಳ್ಳೆಯದಾಗುತ್ತದೆಂಬ ನಂಬಿಕೆಗಳು ಹುಟ್ಟಿಕೊಂಡಿವೆ.

**ರೋಗ–ರುಜಿನಗಳಿಗೆ ಸಂಬಂಧಿಸಿದ ನಂಬಿಕೆಗಳು:** ಆಸೆಗಳನ್ನು ಇಟ್ಟಕೊಂಡು ಸತ್ತವರು, ತೊನ್ನು ಮುಂತಾದ ಪಾಪದಿಂದ ಬಂದ ರೋಗದಿಂದ ಸತ್ತವರನ್ನು, ಸತ್ತ ಬಾಣಂತಿ ಮತ್ತು ಬಸುರಿಯನ್ನು ಕೆಳವರ್ಗಕ್ಕೆ ಸೇರಿದ ಪ್ರಾಣಿಗಳಾದ ನಾಯಿ, ಕತ್ತೆ, ಕಾಗೆ ಮುಂತಾದವನ್ನು ನೆಲದಲ್ಲಿ ಹುಗಿಯುವುದಿಲ್ಲ. ಹೀಗೆ ಮಾಡಿದರೆ ಭೂತಾಯಿ ಮೈಲಿಗೆಯಾಗುತ್ತಾಳೆಂಬ ನಂಬಿಕೆ ಇದೆ.

**ಇತರೆ ನಂಬಿಕೆಗಳು:** ಆಕಳಾಗಲಿ, ಎಮ್ಮೆಯಾಗಲಿ, ಹಾಲುಕೊಡಲು ಪ್ರಾರಂಭಿಸಿದಾಗ ಭೂಮಿಗೆ ಐದು ಅಥವಾ ಏಳು ಹನಿ ಹಾಲನ್ನು ಕರೆದು ಮೊದಲು ಭಕ್ತಿಯಿಂದ ಅರ್ಪಿಸಿದ ನಂತರವೇ ಮನುಷ್ಯರು ಉಪಯೋಗಿಸುವರು. ನಿಂತು ಉಚ್ಚೆ ಹೊಯ್ದರೆ ಭೂತಾಯಿ ಬಾಯಲ್ಲಿ ಹೊಯ್ದಂತೆ, ಆದ್ದರಿಂದ ಕುಳಿತು ಉಚ್ಚೆ ಹೊಯ್ಯಬೇಕು ಎಂಬ ನಂಬಿಕೆ.

**ನೀರಿಗೆ– ಕೆಂಡಕ್ಕೆ ಸಂಬಂಧಿಸಿದ ನಂಬಿಕೆಗಳು:** ಜನಪದರಲ್ಲಿ ನೀರಿನ ಬಗ್ಗೆ ಅನೇಕ ನಂಬಿಕೆಗಳು ಹುಟ್ಟಿಕೊಂಡಿವೆ. ನೀರನ್ನು ಈ ರೀತಿಯಾಗಿ ನಂಬಿ ಕರೆಯುವರು. ಗಂಗೆ, ಮಳೆ, ನದಿ, ತೀರ್ಥ, ನೀರು, ಧೂಳ ಪಾದೂದಕ, ಉದಕ ಮುಂತಾಗಿವೆ. ಇದರ ಬಗೆಗಿನ ನಂಬಿಕೆಗಳೆಂದರೆ; ಬೆಂಕಿ ನೀರಿನಲ್ಲಿ ಕಾಣಿಸಿಕೊಳ್ಳಬಾರದು, ಬೆಂಕಿ ಮತ್ತು ನೀರು ಒಬ್ಬನೇ ತೆಗೆದುಕೊಂಡು ಹೋಗಬಾರದು, ಮಳೆ ಬಿಸಿಲು ಒಟ್ಟಿಗೆ ಬಂದರೆ ನರಿಗೂ, ಕಾಗೆಗೂ ಮದುವೆ. ಶುಭ ಕಾರ್ಯಕ್ಕೆ ಅಥವಾ ಪ್ರಯಾಣಕ್ಕೆ ಹೊರಡುವಾಗ ಕಾಲಿ ಕೊಡ ಅಥವಾ ಬೆಂಕಿ ಕಾಣಿಸಿಕೊಳ್ಳಬಾರದು, ಅಕ್ಕಪಕ್ಕದ ಮನೆಗೆ ರಾತ್ರಿ ನೀರು–ಬೆಂಕಿ ಕೂಡಿಸಿ ಕೊಡಬಾರದು. ಜನಪದರಲ್ಲಿ ನೀರು ಮತ್ತು ಬೆಂಕಿ ಎರಡೂ ವಿರುದ್ಧ ಸಂಕೇತಗಳು.

ಹೋಳಿಹಬ್ಬದಲ್ಲಿ ಕಾಮನನ್ನು ಸುಟ್ಟ ಕೆಂಡದಲ್ಲಿ ಗೆಡ್ಡೆ–ಗೆಣಸು, ಕಡಲೆ ಸುಟ್ಟು ತಿಂದರೆ ಹಲ್ಲು ಗಟ್ಟಿಯಾಗುತ್ತವೆ. ಈ ಕೆಂಡದ ಬೂದಿಯನ್ನು ಹೊಲಗಳಲ್ಲಿ ಚೆಲ್ಲಿದರೆ ಬೆಳೆ ಸಮೃದ್ಧಿಯಾಗಿ ಬೆಳೆಯುವುದೆಂಬ ನಂಬಿಕೆ ಇದೆ. ಕಾಮಣ್ಣನ ಬೆಂಕಿ ತಂದು ಅಡಿಗೆ ಮಾಡುವುದು ಪವಿತ್ರ ಎಂಬ ನಂಬಿಕೆ ಇದೆ. ಕುಳಿತಿರುವ ಬಂಧುಗಳ ಬೆನ್ನ ಹಿಂದೆ, ಎದುರು ಬದರು ಕುಳಿತ ಬಂಧುಗಳ ನಡುವೆ ಬೆಂಕಿ ಒಯ್ಯಬಾರದು. ಅಕ್ಕಸಾಲಿಗರು ಕೆಂಡವಿರುವ ಅಗ್ಗಿಷ್ಟಿಕೆಯನ್ನು ಕಾಳವ್ವ ಎಂದು ಪೂಜಿಸುತ್ತಾರೆ. ಕೈಯಲ್ಲಿ ಕೆಂಡ ಹಾಕಿ ವ್ಯಕ್ತಿಯ ಸತ್ಯತೆಯನ್ನು ಪರೀಕ್ಷಿಸುವ ಪದ್ಧತಿ ಇತ್ತು.

**ಗಾಳಿಗೆ ಸಂಬಂಧಿಸಿದ ನಂಬಿಕೆಗಳು:** ಹಳ್ಳಿಗರು ರಾಶಿಯನ್ನು ತೂರಿ ಜಳ್ಳಿನಿಂದ ಕಾಳನ್ನು ಬೇರ್ಪಡಿಸುವಾಗ, ಗಾಳಿಗೆ ಎಡೆ ಹಿಡಿಯುವ ಪದ್ಧತಿ ಧಾರವಾಡ, ಬೆಳಗಾವಿ, ವಿಜಯಪುರ ಜಿಲ್ಲೆಗಳ ರೈತರಲ್ಲಿ ಈಗಲೂ ಚಾಲ್ತಿಯಲ್ಲಿದೆ. ಗಾಳಿ ಬೀಸದಿದ್ದರೆ 'ಹುಲಿಗೋ ಹುಲಿಗೋ'

ಎಂದು ಕೂಗಿದರೆ ಗಾಳಿ ಬೀಸುತ್ತದೆ ಎನ್ನುವ ನಂಬಿಕೆ ಇದೆ. ದನಕರುಗಳಿಗೆ ಬರುವ ಒಂದು ಬಗೆಯ ರೋಗ 'ಗಾಳೆಮ್ಮ ದೇವಿ' ಎಂದು ಜನಗಳ ನಂಬಿಕೆ. ಕೆಲವು ಕಡೆ ಗಾಳೆವ್ವನ ಗುಡಿಗಳೂ ಇವೆ. ಆಕಳು-ಎಮ್ಮೆ ಹಾಲು ಕರೆಯದಿದ್ದರೆ, ಚಿಕ್ಕಮಕ್ಕಳು ಅಳತೊಡಗಿದರೆ 'ಗಾಳಿ ಮಾರೆವ್ವನ ಕಾಟ' ಎನ್ನುವ ನಂಬಿಕೆ ಇದೆ.

**ದೇವರಿಗೆ ಸಂಬಂಧಿಸಿದ ನಂಬಿಕೆಗಳು:** ವಿಶ್ವ ಸೃಷ್ಟಿಯ ಬಗ್ಗೆ ಹೇಳುವಾಗಲೂ ಕೂಡ ದ್ರಾವಿಡ ಕುಲಗಳು ಅಮ್ಮ ಅಪ್ಪನ ಸಂಬಂಧದ ನೆಲೆಯನ್ನೇ ಆಧಾರವಾಗಿಟ್ಟುಕೊಳುತ್ತವೆ. ಇದು ಸಾಂಖ್ಯ ಯೋಗ ಮೊದಲಾದ ದ್ರಾವಿಡ ತತ್ವಜ್ಞಾನಗಳಲ್ಲಿ ಪ್ರಕೃತಿ, ಪುರುಷ, ಕುಂಡಲಿಶಕ್ತಿ, ಚಕ್ರಗಳು ಎಂದು ಸಾರ್ವತ್ರಿಕರಿಸಲ್ಪಡುತ್ತದೆ. ಮತಿಯ ಆಚರಣೆಗಳಲ್ಲಿ ಇದು ಗಂಗೆ, ಗೌರಿ, ಶಿವ, ಲಕ್ಷ್ಮಿ, ಚಾಮುಂಡಿ, ನಂಜುಂಡ ಸಾಕಾರಗೊಳ್ಳುತ್ತವೆ. ಜೀವನದ ಪ್ರತಿಘಟನೆ, ವಸ್ತು ವಿವರಗಳೆಲ್ಲವೂ ಅಮ್ಮನಿಂದ ತುಂಬಿಹೋಗಿದೆ. ಉದಾ: ಎಲ್ಲಮ್ಮ, ಅಣ್ಣಮ್ಮ, ಗಂಗಮ್ಮ, ದುರುಗಮ್ಮ, ದ್ಯಾಮವ್ವ 'ಅಮ್ಮ'ನ ಹಬ್ಬ, ಜಾತ್ರೆ, ಉತ್ಸವ, ಆಚರಣೆ ನಂಬುಗೆಗಳಿವೆ.

**ದೆವ್ವಕ್ಕೆ ಮತ್ತು ಶರೀರಕ್ಕೆ ಸಂಬಂಧಿಸಿದ ನಂಬಿಕೆಗಳು:** ವಿಶೇಷವಾಗಿ ಯುವಕ ಯುವತಿಯರು ಮದುವೆ ಇಲ್ಲದೆ ತೀರಿಕೊಂಡಾಗ ಜೀವನದಲ್ಲಿ ತಾನು ಬಯಸಿದ ಆ ವ್ಯಕ್ತಿಯನ್ನೇ ದೆವ್ವವಾಗಿ ಕಾಡುತ್ತಾರೆ.

ಕಂಬಕ್ಕೆ ಒಂಟಿ ಕಾಲಿನಿಂದ ನಿಲ್ಲಬಾರದು. ಅದು ಲಕ್ಷ್ಮಿಯ ಸಮಾನ ಸುರಕ್ಷತೆಯನ್ನು ಆಧರಿಸಿ ಹುಟ್ಟಿದ ನಂಬಿಕೆಯಿಂದಾಗಿದೆ. ಮಲಗುವಾಗ ಕಾಲನ್ನು ಚಕಲ್-ಮುಕಳ್ ಹಾಕಿ ಮಲಗಬಾರದು ಇಲ್ಲಿ ಅಮಂಗಳ ಭಾವ ನಂಬಿಕೆಗೆ ಗ್ರಾಸ ಒದಗಿಸಿದೆ. ಯಾರಾದರೂ ಸತ್ತಾಗ ಒಂದೇ ಚಟ್ಟದ ಮೇಲೆ ಮಲಗಿಸುವಾಗಲು ಕೆಲವು ಕಡೆಗೆ ಅದೇ ಸ್ಥಿತಿಯಲ್ಲಿ ಮಲಗಿಸುತ್ತಾರೆ. ಅಂಗಾಲು ಕೆರೆದರೆ ಬಡತನ ಬರುತ್ತದೆ. ಉಪ್ಪು ತುಳಿದರೆ ಕಣ್ಣು ಕುರುಡಾಗುವವು ಇಂಥ ಕೆಲ ನಂಬಿಕೆಗಳು ಉಪಯುಕ್ತವೆಂದೇ ಹೇಳಬೇಕು.

**ಬಾಯಿಗೆ ಸಂಬಂಧಿಸಿದಂತೆ ಕೆಲ ನಂಬಿಕೆಗಳು:** ಬಾಯಿ ತೆರೆದುಕೊಂಡು ಅಂಗಾತ ಮಲಗಬಾರದು, ಬಾಚಣಿಕೆ ಬಾಯಲ್ಲಿಟ್ಟುಕೊಂಡರೆ ಬಾಯಿಬಸಳ ರೋಗ ಬರುತ್ತದೆ. ಬಾಯಿಬಸಳೆ ರೋಗ ಬಾಯಲ್ಲಿ ಬಾಚಣಿಕೆ ಇಡುವುದರಿಂದ ಬರುವುದೆಂದು ಕೆಲ ಕಡೆಗೆ ನಂಬಿಕೊಂಡಿದ್ದಾದರೆ, ಎಂಜಲು ತಿಂದರೆ ಬರುವುದೆಂದು ಮತ್ತೆ ಕೆಲವರ ನಂಬಿಕೆ. ಹಲ್ಲಿನಿಂದ ಉಗುರು ಕಡೆಯಬಾರದು ಹಾಗೆ ಕಡಿದರೆ ವಿಷವೇರುವುದು, ಉಗುರಿನಲ್ಲಿಯ ಹೊಲಸು ಹೊಟ್ಟೆಯೊಳಗೆ ಹೋಗಿ ರೋಗ ಬರುವುದೆಂಬುದು ಜನಪದರ ನಂಬಿಕೆಯಾಗಿದೆ.

**ಊಟ ಉಡುಗೆಗೆ ಸಂಬಂಧಿಸಿದಂತೆ ನಂಬಿಕೆಗಳು:** ಹಿಂಬಡಪೂರ್ತಿ ಕಾಲು ತೊಳೆದು ಊಟಕ್ಕೆ ಕುಳಿತುಕೊಳ್ಳಬೇಕು, ಊಟಕ್ಕೆ ಕುಳಿತಾಗ ಉಂಡೆ ಕಟ್ಟಿ ತಿಂದರೆ ಆಯುಷ್ಯ ಕಡಿಮೆ, ಹಿಂಬಡದ ಮೇಲೆ ಸ್ವಲ್ಪ ತಗ್ಗು ಭಾಗವಿದ್ದು, ನಡೆದಾಡುವಾಗ ಅಲ್ಲಿ ಹೆಚ್ಚು ಧೂಳು ಸೇರುವ ಸಾಧ್ಯತೆಯಿದೆ. ಮುಂದಿನಿಂದ ಹಾಕಿಕೊಂಡ ನೀರು ಹಿಮ್ಮಡಕ್ಕೆ ಮುಟ್ಟದೆ ಇರಬಹುದು. ಉಡುಪನ್ನು ಕುರಿತು ಉಪಯುಕ್ತ ಮತ್ತು ನಿಷೇಧಾತ್ಮಕ ನಂಬಿಕೆಗಳು ಹುಟ್ಟಿಕೊಂಡಿವೆ. ಊಟ ಮಾಡುವಾಗ ತಟ್ಟೆಯಲ್ಲಿ ಬಿದ್ದೀತು ಎಂಬ ಮುನ್ನಚ್ಚರಿಕೆಯ ಕ್ರಮವಾಗಿ, ಟೊಪ್ಪಿಗೆ ಹಾಕಿಕೊಂಡು ಊಟ ಮಾಡಬಾರದು ಎಂಬ ನಂಬಿಕೆ. ಹೊಲಿಯಬಾರದು. ಸ್ತ್ರೀ ನೀತಿಯನ್ನು ಬೋಧಿಸಲು ಸೆರಗು ತೆಗೆದು ಓಡಾಡಬಾರದು ಎಂಬ ನಂಬಿಕೆಗಳಿವೆ.

**ಪ್ರಾಣಿಗೆ ಸಂಬಂಧಿಸಿದ ನಂಬಿಕೆಗಳು:** ನಂಬಿಕೆಗಳು ಸಮುದಾಯದ ಭಾವನಾತ್ಮಕ ಮುಖವಾದರೆ, ಆಚರಣೆಗಳು ಅದರ ಕ್ರಿಯಾತ್ಮಕ ಮುಖ. ಇವೆರಡಕ್ಕೂ ಅನ್ಯೂನ್ಯ ನಂಟು. ಇವುಗಳಲ್ಲಿ ಎಷ್ಟೋ ವೇಳೆ ತರ್ಕಬದ್ಧತೆ ಇಲ್ಲದಿದ್ದರೂ, ಸಮುದಾಯದ ಒತ್ತಾಸೆಯಿಂದ ವಿಶ್ವಾಸಾರ್ಹವಾಗುತ್ತದೆ. ನಂಬಿಕೆಗಳು ಹಾಗೆ ನೋಡಿದರೆ ಸಾರ್ವತಿಕ. ಆದರೂ ಪ್ರದೇಶಿಕ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಸಮಾನತೆ ಮತ್ತು ಪರಸ್ಪರ ವೈರುಧ್ಯಗಳನ್ನು ಹೊಂದಿರಲು ಸಾಧ್ಯ, ಆಯಾ ಪ್ರದೇಶದ ಭೌಗೋಳಿಕ ಹಿನ್ನೆಲೆ, ಸಾಮಾಜಿಕ ಒತ್ತಡ, ಜೀವನ ಪರಿಸರ, ಆಲೋಚನಾ ವಿಧಾನಗಳು, ನಂಬಿಕೆಗಳ ಮೇಲೆ ಪ್ರಭಾವ ಬೀರುತ್ತವೆ.

**ಸಸ್ಯ ಸಂಬಂಧಿ ನಂಬಿಕೆಗಳು:** ಈ ವ್ಯಾಪ್ತಿ ದೊಡ್ಡದು. ಅದರ ಪ್ರತಿಯೊಂದು ಬೇರು, ಗಡ್ಡೆ, ಕಾಂಡ, ಟೊಂಗೆ ಅವುಗಳಿಂದ ಹೊರಡುವ ಹಾಲು, ಅಂಟು, ರಸ, ಎಲೆ, ಹಣ್ಣು, ಬೀಜ, ಕಟ್ಟಿಗೆ, ಇದ್ದಲಿ ಅವುಗಳಿಂದ ತಯಾರಿಸಿದ ಸಾಮಗ್ರಿಗಳು, ಕಂಡುಹಿಡಿದ ನಂಬಿಕೆ ರೂಪದ ಔಷಧಿಗಳವರೆಗೆ ಸಸ್ಯನಂಬಿಕೆಯ ಪ್ರಪಂಚ ಹರಡಿಕೊಂಡಿದೆ. ಧಾರ್ಮಿಕ ಹಿನ್ನಲೆಯಲ್ಲಿ ಹುಟ್ಟಿದ ನಂಬಿಕೆಗಳು ಆಲ, ಅರಳೆ, ಬೇವು, ಹೊನ್ನಿ, ತುಳಸಿ, ಎಕ್ಕೆ, ಉತ್ತರಾಣಿ ಮುಂತಾದವುಗಳನ್ನು ಮಾನವ ದೇವರೆಂದು ಆರಾಧಿಸುತ್ತ ಬಂದಿದ್ದಾನೆ. ಈ ಕುರಿತ ಕೆಲ ನಂಬಿಕೆಗಳು; ಮಂಜಾನೆದ್ದು ಆಲ, ಅರಳೆ, ಬೇವಿನ ಗಿಡಗಳನ್ನು ನೋಡಬೇಕು. ಹೊನ್ನಿ ಕಟ್ಟಿಗೆಯನ್ನು ತಲೆಬಾಗಿಲಕ್ಕೆ ಉಪಯೋಗಿಸಬೇಕು, ಉದಾ:ಸಿಂದಿಗಿಡ, ಕಣಗಲ ಮುಂತಾದ ಗಿಡಗಳಿಂದ ತಯಾರಿಸಿದ ಉಪಕರಣಗಳನ್ನು ಪವಿತ್ರ ಸ್ಥಳ, ಶುಭ ಸಂದರ್ಭದಲ್ಲಿ ಬಳಸಬಾರದೆಂಬ ನಂಬಿಕೆ.

**ಶುಭವನ್ನು ಸೂಚಿಸುವ ನಂಬಿಕೆಗಳು:** ನರಿ ಕೂಗುವಾಗ ರಾಶಿ ಅಳೆದರೆ ಹುಲಸು ಆಗುತ್ತದೆ (ಪ್ರಾಣಿ), ಹೆಣ್ಣು ನೋಡಲು ಹೋಗುವಾಗ ಹನ್ನೊಂದು ಬಾಳೆಹಣ್ಣುಗಳು ಇರುವ ಹಣಿಗೆಯನ್ನು ಒಯ್ಯಬೇಕು.(ಸಂಖ್ಯೆ)**,** ಕಾಮಣ್ಣನ ಚೆಂಡು ಯಾವ ದಿಕ್ಕಿಗೆ ಬೀಳುತ್ತದೆ ಆ ದಿಕ್ಕಿಗೆ ಬೆಳೆ ಹುಲಸು ಅಗುತ್ತದೆ(ದಿಕ್ಕು)**,** ಬನ್ನಿ ಗಿಡವನ್ನು ಬಲಕ್ಕೆ ಮಾಡಿಕೊಂಡು ಹೋದರೆ, ಹೋದ ಕೆಲಸ ಆಗುತ್ತದೆ. (ಬಲ)**,** ಕನಸಿನಲ್ಲಿ ಹಣ್ಣು ಕಂಡ್ರೆ ಹೆಣ್ಣು, ಕಾಯಿ ಕಂಡ್ರೆ ಗಂಡು(ಕನಸು) ಮುಂತಾದವು.

**ಅಶುಭವನ್ನು ಸೂಚಿಸುವ ನಂಬಿಕೆಗಳು:** ಹೆಣ್ಣು ನೋಡಲು ಹೋಗುವಾಗ ಕಟ್ಟಿಗೆ ಹೊರೆ ಎದುರಿಗೆ ಬರಬಾರದು(ವಸ್ತು)**,** ಹೊಲದ ಎಡಕ್ಕೆ ಮಾಡಿ ಬಿತ್ತಬಾರದು(ಎಡ)**,** ನುಗ್ಗೆ ಗಿಡ ಮನೆ ಹತ್ತಿರ ಹಚ್ಚಬಾರದು**,** ಬಾರೆ ಗಿಡ ಮನೆ ಮುಂದೆ ಇರಬಾರದು.

**ಸಸ್ಯ ರಕ್ಷಣೆ ಕುರಿತ ನಂಬಿಕೆಗಳು:** ಹೆಣ್ಣು ಮಕ್ಕಳು ಉಳ್ಳಾಗಡ್ಡಿ ತಿನ್ನಬಾರದು**,** ಮೇಟಿಗೆ ಬೆನ್ನು ಹಚ್ಚಿ ನಿಲ್ಲಬಾರದು**,** ಗಿಡ ಹತ್ತಿಸಿದ ಮೇಲೆ ಆತ ಇಳಿಯುವವರೆಗೆ ಬಿಟ್ಟು ಹೋಗಬಾರದು, ಕಸಬರಗೆ ಒದೆಯಬಾರದು. ಅದು ಪಾರ್ವತಿ ಜಡೆಯ ಸಂಕೇತ, ಕಸಬರಗೆ ಗೋಟು ನಿಲ್ಲಿಸಬಾರದು

**ಧರ್ಮದ ಅಂಜಿಕೆ ಹಾಕುವುದರಿಂದ ಹಲವು ನಂಬಿಕೆಗಳು ಹುಟ್ಟಿಕೊಂಡಿವೆ:** ಹಲಸಿನ ಮರದ ಕೆಳಗೆ ದನಗಳನ್ನು ಕಟ್ಟಿದರೆ ಫಲ ಬಿಡುವುದಿಲ್ಲ, ದೇವರ ಕಂಬವನ್ನು ಒದೆಯಬಾರದು, ಜಾಲಿ ಗಿಡದ ಕೆಳಗೆ ದೀಪ ಹಚ್ಚಿದರೆ, ಅಂಗಿ ಕುಲಾಯಿ ಹಾಕಿದರೆ ಬಂಜೆಗೆ

ಮಕ್ಕಳಾಗುತ್ತವೆ. ಮನೆ ಮಂದೆ ತಿಪ್ಪರಿಕಾಯಿ ಬಳ್ಳಿ ಹಚ್ಚಿದರೆ ಬಡತನ ಬರುತ್ತದೆ, ನುಗ್ಗಿ ಗಿಡ ಹಚ್ಚಿದರ ನುಗ್ಗ ಅಕ್ಕಾರ, ಜೋಡು ಬಾಳೆಹಣ್ಣು ತಿಂದರೆ ಅವಳಿ–ಜವಳಿ ಮಕ್ಕಳಾಗುತ್ತವೆ.

**ಆರೋಗ್ಯ ಬಗ್ಗೆ ಇರುವ ನಂಬಿಕೆಗಳು:** ಒಬ್ಬರು ಮುಡಿದ ಹೂವು ಇನ್ನೊಬ್ಬರು ಮುಡಿಯಬಾರದು. ಮುಡಿದರೆ ತಲೆನೋವು ಬರುವುದು, ಮಕ್ಕಳಿಗೆ ನೆದರು ಆದರೆ ಕಸಬರಗೆ, ಬಿದ್ದು ಪೆಟ್ಟಾದರೆ ರೊಟ್ಟಿ ನಿವಾಳಿಸಿ ಒಗೆಯಬೇಕು, ಯುಗಾದಿ ದಿನ ನೀರಿನಲ್ಲಿ ಬೇವಿನ ತಪ್ಲು ಹಾಕಿ ಸ್ನಾನ ಮಾಡಬೇಕು.

ಒಟ್ಟಿನಲ್ಲಿ ಮಾನವನ ಹುಟ್ಟಿನೊಂದಿಗೆ ಈ ನಂಬಿಕೆಗಳು ಹುಟ್ಟಿಕೊಳ್ಳುತ್ತಾ, ಸಾಂದರ್ಭಿಕವಾಗಿ ಉಳಿಯುತ್ತಾ, ಅಳಿಯುತ್ತಾ ಬದುಕಿನುದ್ದಕ್ಕೂ ಪರಂಪರಾಗತವಾಗಿ ಆಚರಣೆಗೊಳ್ಳುತ್ತಾ ಬರುತ್ತಿವೆ. ಈ ನಂಬಿಕೆಗಳು ಅವರವರ ಮನಸ್ಸಿನ ಆಲೋಚನೆಯ ನೆಲೆಗಟ್ಟಿನ ಮೇಲೆ ನಿಂತಿವೆ. ಹಾಗಾಗಿ ನಂಬಿಕೆಗಳು ಜನಸಾಮಾನ್ಯರ ಸ್ವತ್ತಾಗಿವೆ. ಡಾ.ದೇ.ಜವರೇಗೌಡರು "ನಂಬಿಕೆ ಮಾನವ ಜೀವನದ ಸರ್ವಕ್ಷೇತ್ರಗಳಲ್ಲಿಯೂ ವ್ಯಾಪಿಸಿಕೊಂಡಿದೆ, ಅದೇ ಅವನ ಜೀವನವನ್ನು ರೂಪಿಸುತ್ತದೆ. ಅದೇ ಸಂಸ್ಕೃತಿಯ ತಿರುಳು ಎನ್ನಬಹುದು. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳು ಸಹ ದಿನ ಬೆಳಗಾದರೆ ನಂಬಿಕೆಗಳನ್ನು ನಂಬುತ್ತಾರೆ." ಎಂದು ಪ್ರತಿಪಾದಿಸುವಂತೆ ನಂಬಿಕೆ ಒಂದು ಸಂಸ್ಕೃತಿಯನ್ನು ರೂಪಿಸುವ ಅನೇಕ ಅಂಶಗಳಲ್ಲಿ ಒಂದಾಗಿದೆ. ನಂಬಿಕೆಗಳನ್ನು ವೈಜ್ಞಾನಿಕ ಅಥವಾ ಇತರ ಶಾಸ್ತ್ರಗಳ ನೆಲೆಯಲ್ಲಿ ಇಟ್ಟು ಚರ್ಚಿಸುವುದಕ್ಕಿಂತ ನಂಬಿಕೆಯನ್ನು ಒಂದು ಸಂಸ್ಕೃತಿಯ ಸಂದರ್ಭದಲ್ಲಿ ನೋಡುವುದು ಉಚಿತ.

**ಆಕರ ಗ್ರಂಥಗಳು:**


- ಜಾನಪದ ಅಧ್ಯಯನ– ಡಾ.ಹಾ.ಮಾ.ನಾಯಕ
- ಜನಪದ ನಂಬಿಕೆಗಳು– ಕನ್ನಡ ವಿಶ್ವಕೋಶ 1976 ಮೈ.ವಿ.ವಿ.
- ನಮ್ಮ ಜನಪದ ನಂಬಿಕೆಗಳು– ಸಂ.ಜಿ.ವಿ.ದಾಸೇಗೌಡ
- ಜಾನಪದ ಸಾಹಿತ್ಯ ದರ್ಶನ–23– ಡಾ.ಎಂ.ಬಿ.ನೇಗಿನಾಳ
- ಗ್ರಾಮೀಣ ವಿಕಾಸ – ಜಗನ್ನಾಥ ಜಮಾದಾರ
- ಆನ್ವಯಿಕ ಜಾನಪದ – ಡಾ. ಬಿ.ಎ.ವಿವೇಕ ರೈ
- ನಮ್ಮ ನಂಬಿಕೆಗಳು – ಡಾ. ಡಿ.ಕೆ.ರಾಜೇಂದ್ರ
- ಕನ್ನಡ ಜನಪದ ನಂಬಿಕೆಗಳು–ಸಂ.ಪ್ರೊ. ವಿವೇಕ ರೈ
- ಉತ್ತರ ಕರ್ನಾಟಕದ ಜನಪದ ನಂಬಿಕೆಗಳು– ಸಂ.ಡಾ.ಮಲ್ಲಕಾರ್ಜುನ ಲಠ್ಠೆ